

ಸೆಕ್ಸ್, ಸಿನಿಮಾ, ಧರ್ಮ ಮತ್ತು ರಾಜಕೀಯ– ಭಾರತೀಯರ ರಕ್ತದಲ್ಲಿ ಅತ್ಯಧಿಕ ಸಾಂದ್ರತೆಯಲ್ಲಿ ಹರಿಯುತ್ತಿರುವ ಅಂಶಗಳು ಎನ್ನಲಡ್ಡಿಯಿಲ್ಲ. 2017ರತ್ತ ಒಂದು ಹಿನ್ನೋಟ ಹರಿಸಿದರೆ ಎದ್ದು ಕಾಣುವುದು ಇದುವೇ. ಇಡೀ ವರ್ಷ ಭಾರತೀಯರು ಈ ನಾಲ್ಕು ಅಂಶಗಳಿಗೆ ಸಂಬಂಧಿಸಿಯೇ ಅಥವಾ ಅವುಗಳ ಸುತ್ತಮುತ್ತವೇ ತಮ್ಮ ಚಟುವಟಿಕೆಗಳನ್ನು ಸಾಂದ್ರಗೊಳಿಸಿದ್ದಾರೆ; ತಮ್ಮ ಹೆಚ್ಚಿನ ಸಮಯವನ್ನು ವ್ಯಯಿಸಿದ್ದಾರೆ. ಮಾಧ್ಯಮಗಳಲ್ಲೂ ಅತ್ಯಧಿಕ ಮಹತ್ವ ಪಡೆದಿದ್ದು ಈ ನಾಲ್ಕು ವಿಷಯಗಳಿಗೆ ಸಂಬಂಧಿಸಿದ ಸುದ್ದಿಗಳೇ.

2017ರ ಹಿನ್ನೋಟವನ್ನು ಮುಖ್ಯವಾಗಿ 10 ಘಟನೆಗಳಿಗೆ ಮಿತಿಗೊಳಿಸಿ ಇಲ್ಲಿ ಕೊಡಲಾಗಿದೆ. ಈ ಹತ್ತು ಘಟನೆಗಳು 2017ರಲ್ಲಿ ಭಾರತೀಯ ಜನಜೀವನವನ್ನು ಸಾಕಷ್ಟು ಪ್ರಭಾವಿಸಿವೆ. ಜನರ ಕುತೂಹಲವನ್ನು ಕೆರಳಿಸಿವೆ. ಬಹುಮಟ್ಟಿಗೆ ಜನರ ಆಶೋತ್ತರಗಳನ್ನು, ಆಕ್ರೋಶಗಳನ್ನು ಮತ್ತು ನಾಡಿಮಿಡಿತವನ್ನೂ ಎತ್ತಿ ತೋರಿಸಿವೆ. ಈ ಘಟನೆಗಳಿಗೆ ಹೊರತಾದ ಸಂಗತಿಗಳೂ ಇಲ್ಲವೆಂದಲ್ಲ. ಆದರೆ ಅವುಗಳು ಬೀರಿರುವ ಪರಿಣಾಮ ಕಡಿಮೆ.



ವಿಜಯ ಮಲ್ಯ ಬರಲಿಲ್ಲ



ವಿಜಯ್
'ಮರ್ಸಲ್' ಗೆದ್ದಿತು